ಶಾಸಕರಿಗೆ ಒದಗಿಸಲಾಗುವುದು. ಉಳಿದಂತೆ 'ಸಿ' ವರ್ಗದ ದೇವಸ್ಥಾನಗಳ ಆದಾಯವು ರೂ.5-00 ಲಕ್ಷಕ್ಕಿಂತ ಕಡಿಮೆ ಇರುತ್ತದೆ.

ಪರವಾನಿಗೆ ಪಡೆದ ಮದ್ಯದ ಅಂಗಡಿಗಳು

1179(887); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪರವಾನಿಗೆ ಪಡೆದಿರುವ ಮದ್ಯದ ಅಂಗಡಿಗಳೆಷ್ಟು;

ಆ) ಎಂ.ಎಸ್.ಐ.ಎಲ್. ವತಿಯಿಂದ ಮದ್ಯದಗಂಡಿ ತೆರೆಯಲು ಇರುವ ನಿಯಮಗಳಾವುವು;

ಇ) ಈ ಕ್ಷೇತ್ರದಲ್ಲಿ ಎಂ.ಎಸ್.ಐ.ಎಲ್. ವತಿಯಿಂದ ಮದ್ಯದಂಗಡಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿ)

ಅ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ನೀಡಲಾದ ಪರವಾನಿಗೆಗಳ ವಿವರ ಕೆಳಕಂಡಂತಿದೆ.

ಸನ್ನದಿನ ವಿಧ	ಸಂಖ್ಯೆ
ಸಿಎಲ್-2	33
ಸಿಎಲ್-4	02
ಸಿಎಲ್-7	02
ಸಿಎಲ್-9	33
ಸಿಎಲ್-11ಸಿ	01
ಆರ್‌ವಿಬಿ	02
ಒಟ್ಟು	73

ಆ) ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968, ರ ನಿಯಮ 3(11ಸಿ) ಮತ್ತು ನಿಯಮ 8 ರಂತೆ ಹಾಗೂ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967, ರ ನಿಯಮ

5 ರನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸನ್ನದುಗಳನ್ನು ನೀಡಲಾಗುವುದು.

ಇ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಎಂ.ಎಸ್.ಐ.ಎಲ್. ವತಿಯಿಂದ ತುಮಕೂರು ನಗರ ಪ್ರದೇಶದಲ್ಲಿ ಭೀಮಸಂದ್ರ, ಬಿ.ಹೆಚ್.ರಸ್ತೆ ಇಲ್ಲಿ ಒಂದು ಸಿಎಲ್–11ಸಿ ಸನ್ನದು ಕಾರ್ಯನಿರ್ವಹಿಸುತ್ತಿದೆ. ಇನ್ನೂ ಎರಡು ಸಿಎಲ್–11ಸಿ ಸನ್ನದು ನೀಡಲು ಬಾಕಿ ಇದ್ದು ಈ ಪೈಕಿ ತುಮಕೂರು ಪಟ್ಟಣದ ಬಿ.ಹೆಚ್. ರಸ್ತೆಯಲ್ಲಿ ಒಂದು ಸನ್ನದು ಮಂಜೂರಾತಿಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಈ ಪ್ರಸ್ತಾವನೆಗೆ ಆಕ್ಷೇಪಣೆ ವ್ಯಕ್ತವಾಗಿ ಮಾನ್ಯ ಪ್ರಿನ್ಸಿಪಲ್ ಸಿವಿಲ್ ಜಡ್ಜ್(ಜೂನಿಯರ್ ಡಿವಿಷನ್) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವು ಬಾಕಿ ಇರುತ್ತದೆ. ಉಳಿದ ಇನ್ನೊಂದು ಸಿಎಲ್–11ಸಿ ಸನ್ನದು ನೀಡಲು ಬಾಕಿ ಇದ್ದು, ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಪ್ಲಾಸ್ಟಿಕ್ ನಿಷೇಧ

1180(888); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) 40 ಮೈಕ್ರಾನ್‌ಗಿಂತ ಕಡಿಮೆ ಪ್ಲಾಸ್ಟಿಕ್ ನಿಷೇಧದ ನಂತರ ರಾಜ್ಯಾದ್ಯಂತ ದಾಳಿ ಮಾಡಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ವಶಪಡಿಸಿಕೊಂಡಿರುವ ಪ್ರಕರಣಗಳೇಷ್ಟು; ಅದರ ಪ್ರಮಾಣ ಎಷ್ಟು;

ಆ) ತಪ್ಪಿತಸ್ಥರಿಗೆ ವಿಧಿಸಿರುವ ದಂಡದ ಪ್ರಮಾಣ ಎಷ್ಟು; ಕಾನೂನಿನಲ್ಲಿದ್ದಂತೆ ತಪ್ಪಿತಸ್ಥರ ಮೇಲೆ ಜರುಗಿಸಬಹುದಾದ ಕ್ರಮಗಳೇನು?